ಈ ಜೌಗು ನೆಲದಲ್ಲಿ ನಮಗೆ ಗೋಚರಿಸದ ಯಾವುದೋ ದೊಡ್ಡ ಸಮಸ್ಯೆ ಕಾಡಿರಬಹುದು. ನೀರು ಮಲಿನಗೊಂಡಿರಬಹುದು. ಇಲ್ಲವೇ ಸೂಕ್ತ ಆಹಾರ ಸಿಗುವಲ್ಲಿ ಏನೋ ಯಡವಟ್ಟಾಗಿರಬಹುದು. ಇಂತದ್ದೇ ಯಾವುದೋ ಬಲವಾದ ಕಾರಣಕ್ಕೆ ಹಕ್ಕಿಗಳು ಬೇರೆ ಕಡೆ ವಲಸೆ ಹೋಗಿರಬಹುದು ಎಂದು ತಮಗೆ ತೋಚಿದಂತೆ ಅಂದಾಜು ಮಾಡತೊಡಗಿದರು. ಒಂದು ವೇಳೆ ಆಹಾರದಲ್ಲಿ ಸಮಸ್ಯೆಯಾಗಿ ಹಕ್ಕಿಗಳು ಸತ್ತರೆ ಅವುಗಳ ದೇಹವೋ? ರೆಕ್ಕೆ ಪುಕ್ಕಗಳೋ? ಸಿಗಬೇಕು. ಅಂತದ್ದೂ ಇಲ್ಲಿ ಸಿಗುತ್ತಿಲ್ಲ ಎಂದರೆ ಎಲ್ಲೋ ಏನೋ ಪಕ್ಕಾ ಎಡವಟ್ಟಾಗಿದೆ! ಇದರ ಮೂಲವನ್ನು ಹುಡುಕದೇ ಬಿಡಬಾರದೆಂದು ನಂದಕಿಶೋರ್ ಭುಜ್ಬಲ್ ತಮ್ಮ ತನಿಖೆಯನ್ನು ಮುಂದುವರೆಸಿದರು. ಇದಕ್ಕಾಗಿ ಅನೇಕ ಪರಿಸರ ತಜ್ಞರನ್ನು, ಹಕ್ಕಿಜ್ಞಾನಿಗಳನ್ನು, ಮೀನುಗಾರಿಕೆ ಇಲಾಖೆಯವರನ್ನು ಸತತ ಸಂಪರ್ಕಿಸಿದರು.

ನಿರಂತರ ಬೇಟೆಯಿಂದ ಹೆದರಿದ ಹಕ್ಕಿಗಳು ವಲಸೆ ಬರುವುದನ್ನೇ ಕಡಿಮೆ ಮಾಡಿದವು. ತಮಗೆ ಅಪಾಯ ಎನಿಸುವ ಜಾಗೆಯನ್ನು ಪಕ್ಷಿಗಳು ಬಲುಬೇಗ ತೊರೆದು ಬಿಡುತ್ತವೆ. ಈ ಸಂದೇಶವನ್ನು ಉಳಿದೆಡೆಯ ಹಕ್ಕಿಗಳ ಗಮನಕ್ಕೂ ತಂದು ಎಚ್ಚರಿಕೆಯಿಂದ ಇರುವಂತೆ ಸೂಚಿಸುತ್ತವೆ. ಇವೆಲ್ಲಾ ಕಾಣದ, ಕೇಳದ ಸಂಗತಿಗಳಾದ ಕಾರಣ ಮನುಷ್ಯ ಜಗತ್ತಿಗೆ ಸುಲಭಕ್ಕೆ ಅರ್ಥವಾಗುವುದಿಲ್ಲ. ಹಕ್ಕಿಗಳಿಗೆ ನಮ್ಮಂತೆ ಕಾನೂನು, ಕೋರ್ಟು, ಕಚೇರಿ, ಮೀಡಿಯಾ, ಧರಣಿ, ಸತ್ಯಾಗ್ರಹ, ಬಂದ್‌ಗಳಂತಹ ಯಾವ ಸವಲತ್ತುಗಳೂ ಇಲ್ಲ. ಜೊತೆಗೆ ಮಾತಾಡಲು ಬಾಯಿ ಕೂಡ ಇಲ್ಲ.

ಮುಂದೆ ನಂದಕಿಶೋರ್ ಬುಜ್ಬಲ್, ಅವಿನಾಶ್ ಕೇಮ್ಸೆ, ಪಂಚಮಿ ಮುಂತಾದವರು ಊರಿನವರ ಸಖ್ಯವನ್ನು ಮೆಲ್ಲಗೆ ಗಳಿಸಲು ಪ್ರಯತ್ನಿಸಿದರು. ಹಳ್ಳಿ ಜನರ ಆರೋಗ್ಯಕ್ಕೆ ಉಚಿತ ಕ್ಯಾಂಪುಗಳನ್ನು, ಔಷಧಿ, ಮಾತ್ರೆ, ಸಣ್ಣಪುಟ್ಟ ಆಪರೇಶನ್‌ಗಳನ್ನೂ ಮಾಡಿಸಿದರು. ಅವರ ಮಕ್ಕಳ ಓದಿನ ವಿಷಯದಲ್ಲಿ ಆಸಕ್ತಿ ತೋರಿಸಿದರು. ಹಳ್ಳಿಯ ದೈವಕ್ಕೆ ದೇವಸ್ಥಾನ ಕಟ್ಟಿಸಿದರು. ಹಗಲು ರಾತ್ರಿ ಅವರ ಕಷ್ಟಗಳ ಜೊತೆ ಎರಡು ವರ್ಷ ಕಾಲ ಕಳೆದರು. ಆಮೇಲೆ ನಿಧಾನಕ್ಕೆ ಹಳ್ಳಿಯ ಜನರ ಸ್ನೇಹ ಪ್ರೀತಿ ಸಿಕ್ಕವು. ಅಷ್ಟರಲ್ಲಾಗಲೆ ಹಕ್ಕಿ ಕಣ್ಮರೆಗಳ ರಹಸ್ಯವನ್ನು ಅರಿತುಕೊಂಡಿದ್ದರು. ಏನಾದರೂ ಮಾಡಿ ಈ ಕಳ್ಳಬೇಟೆಯನ್ನು ತಡೆಯಬೇಕು

